† ಶ್ರೀ ಬಿ. ಬಸವಲಿಂಗಪ್ಪ.— ಈಗ ಸಧ್ಯಕ್ಕೆ ಇಲಾಖೆಯಂ ಮುಖಾಂತರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡುವ ಅವಶ್ಯಕತೆ ಏನೂ ಇಲ್ಲ. ಆದರೂ ಕೂಡ ನಾವು ಈ ವಿಷಯವನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದೇವೆ. ಒಂದು ವೇಳೆ ಎಲ್ಲೆಲ್ಲಿ ಈ ಅಭಾವ ಪರಿಹಾರ ಕಾಮಗಾರಿಗಳ ಅವಶ್ಯಕತೆ ಇದೆ ಎಂದು ತಿಳಿದುಬರುತ್ತದೆ ಅಂಥ ಕಡೆ ಕೆಲಸ ಪ್ರಾರಂಭಮಾಡಿಸುತ್ತೇವೆ. ಈಗ ಸಾಯಿಲ್ ಕನ್ಸರ್ವೇಷನ್ ಬಗ್ಗೆ ಬಂಡಿಂಗ್ ಕೆಲಸವನ್ನು ೩ ವರ್ಷಕ್ಕೆ ತೆಗೆದುಕೊಂಡಿದ್ದೇವೆ, ಅದರಲ್ಲಿ ಸುಮಾರು ೭೫ ಜನ ಕೆಲಸ ಮಾಡುತ್ತಿದ್ದಾರೆ. ಡಿ.ಪಿ.ಐ ರೆಗ್ಯುಲರ್ ವರ್ಕ್ಸ್‌ನಲ್ಲಿ ಸುಮಾರು ೮೫ ಜನ ಕೆಲಸ ಮಾಡುತ್ತಿದ್ದಾರೆ. ಅಫೋರ್‌ಸ್ಟೇಷನ್‌ನಲ್ಲಿ ೫ ವರ್ಷಕ್ಕೆ ಕೆಲಸ ತೆಗೆದುಕೊಂಡಿದ್ದೇವೆ. ಇದರಲ್ಲೆ ೧೬೫ ಜನ ಕೆಲಸ ಮಾಡುತ್ತಿದ್ದಾರೆ. ಮತ್ತು ಸುಮಾರು ೩೪೭ ಮ್ಯಾನ್‌ಡೇಸ್ ಮಾಡಿಕೊಂಡಿದ್ದಾರೆ. ಎಂ.ಐ. ಟ್ಯಾಂಕ್‌ನಲ್ಲಿ ೬ ಕೆಲಸವನ್ನು ತೆಗೆದುಕೊಂಡಿದ್ದೇವೆ, ಇದರಲ್ಲೂ ಕೂಡ ೧೬೫ ಜನ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ. ಬಿ. ಪಾಟೀಲ್.—ತಾವು ಡೆಪ್ಯುಟಿ ಕಮಿಷನರ್‌ರವರಿಂದ ರಿಪೋರ್ಟ್ ತರಿಸಿಕೊಳ್ಳುತ್ತೀರಿ. ಈಗ ನಾನು ತಮ್ಮನ್ನು ಕೇಳುವುದೇನೆಂದರೆ ತಮ್ಮ ಪಿ.ಡಬ್ಲ್ಯು.ಡಿ. ಇಲಾಖೆಯಿಂದ ಜನಗಳಿಗೆ ಏನಾದರೂ ಅಭಾವ ಪರಿಹಾರ ಕಾಮಗಾರಿಗಳನ್ನು ಒದಗಿಸಿಕೊಡುತ್ತೀರಾ.?

ಶ್ರೀ ಬಿ. ಬಸವಲಿಂಗಪ್ಪ.— ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಚೆನ್ನಾಗಿ ನಿಮ್ಮ ಭಾಗದಲ್ಲಿ ಮಳೆ ಆಗಿರುವುದರಿಂದ ಮುಂದಿನ ಸಾರಿ ಬೆಳೆ ಚೆನ್ನಾಗಿ ಆಗುತ್ತದೆ. ಆದರೂ ನಿಮ್ಮ ತಾಲ್ಲೂಕನ್ನು ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದೇವೆ. ಅಲ್ಲದೆ ಇದಕ್ಕಾಗಿ ಒಂದು ಪ್ರತ್ಯೇಕ ಸ್ಕೀಮನ್ನೇ ತೆಗೆದುಕೂಂಡು ಬರುತ್ತಿದ್ದೇವೆ. ಆ ಸ್ಕೀಂ ಅವಶ್ಯಕತೆ ಕಂಡುಬಂದರೆ ಖಂಡಿತವಾಗಿಯೂ ನಿಮ್ಮ ಜಿಲ್ಲೆಗೆ ಪ್ರಾಧ್ಯಾನ್ಯತೆ ಕೊಡುತ್ತೇವೆ.

## Cess amount collected by Agricultural Produce Market Committee, Bijapur.

894. Sri B. B. Patil (Tikota).— Will the Minister of State for Regulated Markets be pleased to state.—

(*a*) whether it has come to the notice of the Government that the cess amount collected by Agricultural Produce Market Committee, Bijapur from agriculturists is not being utilised for any developmental activities;

(*b*) if so, the purpose for which the said cess amount is collected;

(*c*) the total amount collected by Agricultural Produce Market Committee, Bijapur so far;

(*d*) whether the Government propose to give a part of the collected amount to Taluk Development Boards under its jurisdiction for developmental works;

(*e*) if not, the reasons therefor?

Sri A. B. Jakanur (Minister of State for Regulated Markets).—

(*a*) No cess is collected but market fee is collected from Sellers. It is being utilised for the construction, improvement, repair and maintenance of rural roads, in the State.

(*b*) The said amount collected as market fee is being utilised for construction, improvement, repair and maintenance of rural roads.

(*c*) Rs. 54,84,183-51.

(*d*) No

(*e*) The amount collected by each Agricultural Produce Market Committee, in the State by way of market fee from sellers is credited to "Karnataka Roads & Bridges Fund" as per sub-section (3) of Section 65 of the Karnataka Agricultural Produce Marketing (Regulation) Act, 1966, and the said amount will be spent for the purpose of construction, improvement, repairs and maintenance of rural roads in the State, by the PWD.

ಶ್ರೀ ಬಿ. ಬಿ. ಪಾಟೀಲ್.— ಸ್ವಾಮಿ, ನನ್ನ (೫) ಪ್ರಶ್ನೆಗೆ ಉತ್ತರವಾಗಿ ಈವರೆಗೆ ಬಿಜಾಪುರ ವ್ಯವಸಾಯೋತ್ಪನ್ನ ಮಾರುಕಟ್ಟೆಯವರು ವಸೂಲ್ಮಾಡಿದ ಒಟ್ಟು ಮೊಬಲಗು ೫೪,೮೪,೧೮೩-೫೧ ರೂ. ಗಳು ಎಂದು ತಿಳಿಸಿದ್ದೀರಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ನಮ್ಮ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಈಗ ಹಣ ಇಲ್ಲದಿರುವುದರಿಂದ ನಮ್ಮ ಭಾಗದ ವ್ಯವಸಾಯೋತ್ಪನ್ನ ಮಾರುಕಟ್ಟೆಗಳಲ್ಲಿ ವಸೂಲಾಗುವ ಹಣವನ್ನು ನಮ್ಮ ಭಾಗದ ರಸ್ತೆಗಳು, ಸೇತುವೆಗಳು, ಇವುಗಳ ನಿರ್ಮಾಣ ಹಾಗೂ ದುರಸ್ತಿಗೋಸ್ಕರ ಖರ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎ. ಬಿ. ಜಕನೂರು.— ಈ ವಿಷಯದ ಬಗ್ಗೆ ಮಾನ್ಯ ಪಿ.ಡಬ್ಲ್ಯು.ಡಿ. ಇಲಾಖೆಯ ಮಂತ್ರಿಯವರೊಡನೆ ನಾನು ಮಾತನಾಡಿದ್ದೇನೆ. ಇವತ್ತು ಈ ವ್ಯವಸಾಯೋತ್ಪನ್ನ ಮಾರುಕಟ್ಟೆಗಳಲ್ಲಿ ೧ ರೂಪಾಯಿ ಫೀಸನ್ನು ಏನು ವಸೂಲ್ಮಾಡುತ್ತಿದ್ದೇವೆ ಅದನ್ನು ರಸ್ತೆಗಳ ಮತ್ತು ಸೇತುವೆಗಳ ನಿರ್ಮಾಣ ಹಾಗೂ ದುರಸ್ತಿಗೋಸ್ಕರ ಖರ್ಚು ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಆದರೆ ವಸೂಲಾದ ಹಣವನ್ನೆಲ್ಲಾ ತಾಲ್ಲೂಕು ಬೋರ್ಡ್‌ಗೇ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಬಿ. ಪಾಟೀಲ್.— ಸ್ವಾಮಿ, ವ್ಯವಸಾಯೋತ್ಪನ್ನ ಮಾರುಕಟ್ಟೆಗಳಿಂದ ವಸೂಲ್ಮಾಡಿದ ಹಣವೆಲ್ಲಾ ಹಾಗೆಯೇ ನಿಂತುಬಿಟ್ಟಿದೆ, ಅದನ್ನು ಖರ್ಚು ಮಾಡೇ ಇಲ್ಲ. ಆದ್ದರಿಂದ ಆ ಹಣವನ್ನೆಲ್ಲಾ ಖರ್ಚು ಮಾಡಲು ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಬಿ. ಜಕನೂರು.— ಸ್ವಾಮಿ, ಆಯಾ ತಾಲ್ಲೂಕಿನಲ್ಲಿ ವಸೂಲಾದ ಹಣವನ್ನೆಲ್ಲಾ ಅಲ್ಲೇ ಖರ್ಚು ಮಾಡುವುದಕ್ಕಾಗುವುದಿಲ್ಲ. ಅದನ್ನು ರಾಜ್ಯದ ಎಲ್ಲಾ ಕಡೆಗೂ ಉಪಯೋಗಿಸಬೇಕಾಗುತ್ತದೆ. ಆರೀತಿ ಉಪಯೋಗಿಸುವಾಗ ಒಂದು ತಾಲ್ಲೂಕಿಗೆ ಜಾಸ್ತಿ ಖರ್ಚಾಗಬಹುದು, ಇನ್ನೊಂದು ತಾಲ್ಲೂಕಿಗೆ ಕಡಿಮೆ ಖರ್ಚಾಗಬಹುದು. ಆದರೆ ಎಲ್ಲ ತಾಲ್ಲೂಕುಗಳಿಗೂ ಒಂದೇ ಸಮನಾಗಿ ಖರ್ಚು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಬಿ. ಪಾಟೀಲ್.— ತಾಲ್ಲೂಕುವಾರು ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ?

SRI A. B. JAKANUR.— No fund was allotted from out of Karnataka Roads and Bridges fund to the said 4 taluks during the financial years 1975-76 and 1976-77. During the financial year 1977-78 an amount of Rs. 11,960 and Rs. 49,948 was allotted to Bijapur and Indi taluks respectively from out of Karnataka Roads and Bridges Fund and the said amount was spent during the said financial year 1977-78. No fund was allotted from out of Karnataka Roads and Bridges Fund to Sindgi and Basavana Bagewadi taluks during the financial year 1977-78.

An amount of Rs. 11,360 was spent for the construction of culvert for the Bijapur–Okkali road of 9.3 Kms. in Bijapur taluk during the financial year 1977–78. An amount of Rs. 49,948 was spent for the construction of culvert across Badami–Bijnala on the Shirdon-Lingsugur road of 92 kms. in Indi taluk during the financial year 1977–78.

ಶ್ರೀ ಬಿ. ಬಿ. ಪಾಟೀಲ್.— ಸ್ವಾಮಿ, ನಮ್ಮ ಬಾದಾಮಿ, ಲಿಂಗಸೂಗೂರು, ಬಿಜಾಪುರ ಇಲ್ಲಿನ ವ್ಯವಸಾಯೋತ್ಪನ್ನ ಮಾರುಕಟ್ಟೆಗಳಿಂದ ಬರುವ ಹಣವನ್ನೆಲ್ಲಾ ಆಯಾ ಪ್ರದೇಶದ ಅಭಿವೃದ್ಧಿಗೋಸ್ಕರ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಬಿ. ಜಕನೂರು.— ನಾನು ಮೊದಲೇ ಹೇಳಿದಂತೆ ಮಾನ್ಯ ಪಿ.ಡಬ್ಲ್ಯು.ಡಿ. ಇಲಾಖೆಯ ಮಂತ್ರಿಯವರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಯಾವ ಯಾವ ತಾಲ್ಲೂಕಿನಲ್ಲಿ ಅಲ್ಲಿಯ ವ್ಯವಸಾಯೋತ್ಪನ್ನ ಮಾರುಕಟ್ಟೆಗಳಿಂದ ಎಷ್ಟೆಷ್ಟು ಹಣ ವಸೂಲಾಗುತ್ತದೆ ಅದರಲ್ಲಿ ಕನಿಷ್ಠ ಶೇ.೮೦ ಭಾಗದಷ್ಟನ್ನಾದರೂ ಆಯಾ ಪ್ರದೇಶದ ಅಭಿವೃದ್ಧಿಗೋಸ್ಕರವೇ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

## Sub Transmission lines in Arasikere

911 SRI D.B. GANGADHARAPPA(Arasikere).—Will the Minister of State for Information and Youth Services be pleased to State:

(*a*) the No. of sub-transmission lines sanctioned in Arasikere Taluk and the dates of their sanction ;

(*b*) out of the number commissioned, if not the reason for the delay ;

(*c*) the percentage of Village electrification done in Arasikere constituency and whether it is below the State level ;

(*d*) if so, whether the un-electrified villages in Arasikere Taluk will be included in Rural Electrification Programme?

SRI K.H. SRINIVAS (Minister of State for Information and Youth Services).—

(*a*)—

4 as under.—

| *Sub-Tr. line* | *Date of sanction* |
|---|---|
| 1. Bendekere to Garudanagiri | 28–1–76 |
| 2. Hiresadarahally to Karadihally | 3–10–73 |
| 3. Chikkur to Bettadapura | 10–1–76 |
| 4. Arasikere to Upparakalenanally | 24–12–75 |

(*b*) Out of the above four Sub-transmission lines, the 2nd is completed and 2 villages enroute have also been electrified, The delay in completing the remaining 3 Subtransmission lines is due to the fact